ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂ. DTE-ADMI0ACM2/32/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:21-06-2022.

**-:: ಸು ತ್ತೋಲೆ ::-**

**ವಿಷಯ:** **2022-23ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಸಂಬಂಧ - ಮೊದಲು ಬಂದವರಿಗೆ ಮೊದಲ ಆದ್ಯತೆ ಪ್ರವೇಶಾತಿ ಅವಧಿಯನ್ನು ವಿಸ್ತರಿಸುವ ಬಗ್ಗೆ.**

**ಉಲ್ಲೇಖ:**
1. ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ.DTE-ADMI0ACM2/32/2022, ದಿ:18-05-2022, 26-05-2022 & 10-06-2022.
2. ಹಲವು ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳ ಮನವಿ.

-000000-

ಉಲ್ಲೇಖಿತ ಪ್ರವೇಶಾಧಿಸೂಚನೆಯಲ್ಲಿ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ (ಅನುದಾನಿತ ಕೋರ್ಸುಗಳು)ಪೂರ್ಣಾವಧಿಯ ಇಂಜಿನಿಯರಿಂಗ್ ಮತ್ತು ನಾನ್-ಇಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇಲೆ ಪ್ರವೇಶ ಪಡೆಯಲು ದಿನಾಂಕ:20-06-2022 ಕೊನೆಯ ದಿನಾಂಕವಾಗಿ ನಿಗಧಿಪಡಿಸಲಾಗಿತ್ತು.

ಆದರೆ, ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿರುವುದರಿಂದ ಭರ್ತಿ ಆಗದ ಉಳಿಕೆ ಸೀಟುಗಳಿಗೆ ಪ್ರವೇಶ ಅವಧಿಯನ್ನು ವಿಸ್ತರಿಸಲು ಪಾಲಿಟೆಕ್ನಿಕ್‌ನ ಪ್ರಾಂಶುಪಾಲರುಗಳು ಕೋರಿರುವುದನ್ನು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯ ಮೇರೆಗೆ ಪ್ರವೇಶಾವಧಿಯನ್ನು ಈ ಕೆಳಕಂಡಂತೆ ವಿಸ್ತರಿಸಿ ಅನುಮತಿ ನೀಡಲಾಗಿದೆ.

| | |
|---|---|
| ಅರ್ಜಿಯನ್ನು ಸಂಸ್ಥೆಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಪ್ರವೇಶ ಬಯಸುವ ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸಿ ಸ್ಥಳದಲ್ಲಿಯೇ **(Spot Admission)** ಪ್ರವೇಶ ಪಡೆಯಲು ಕೊನೆಯ ದಿನಾಂಕ:<br>ವಿ.ಸೂ:- ಅರ್ಜಿ ಸ್ವೀಕೃತಿಗೆ ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೂ ಮೊದಲೇ ಎಲ್ಲಾ ಸೀಟುಗಳು ಭರ್ತಿಯಾದಲ್ಲಿ ಆ ನಂತರ ಯಾವುದೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. | **30-06-2022ರ ಸಂಜೆ 5.30ರ ವರೆಗೆ** |

ಪ್ರಾಂಶುಪಾಲರು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಂಡು ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡುವುದು. ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ (ಅನುದಾನಿತ ಕೋರ್ಸುಗಳಲ್ಲಿ) ಭರ್ತಿಯಾಗದೇ ಖಾಲಿ ಉಳಿದಿರುವ ಸೀಟುಗಳನ್ನು ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿ/ಪೋಷಕರುಗಳ ಗಮನಕ್ಕೆ ತರಲು ಸೂಚಿಸಿದೆ. **ಪ್ರಯುಕ್ತ,** ಇದನ್ನು ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ***ಕೋವಿಡ್-19 ಹಿನ್ನೆಲೆಯಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿಗಳನ್ನು ಹಾಗೂ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.***

*ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.*

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

*ರಾಜ್ಯದ ಸರ್ಕಾರಿ / ಅನುದಾನಿತ - ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ*

ಸದರಿ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ನಿಯಮಗಳ ಪ್ರಕಾರ ತಮ್ಮ ಹಂತದಲ್ಲಿಯೇ **ದಿ:30-06-2022ರ** ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

**ಪ್ರತಿ ಮಾಹಿತಿಗಾಗಿ:-**

1) ಆಯುಕ್ತರ ಆಪ್ತಶಾಖೆಗೆ.
2) ನಿರ್ದೇಶಕರ ಆಪ್ತಶಾಖೆಗೆ.
3) ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ.
4) ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ.
5) ಸಾರ್ವಜನಿಕ ಸಂಪರ್ಕಾಧಿಕಾರಿ. ತಾಂತ್ರಿಕ ಶಿಕ್ಷಣ ಇಲಾಖೆ. ಬೆಂಗಳೂರು.
6) ಡಿಪಿಓ(1) ಮತ್ತು ಡಿಪಿಓ(2) ವಿಭಾಗಕ್ಕೆ.
7) ಇ.ಆರ್.ಎಸ್ ವಿಭಾಗಕ್ಕೆ - ಸಿ.ಬಿ.ಎಸ್.ಇ. ಐ.ಸಿ.ಎಸ್.ಇ ಹಾಗೂ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಇ-ಮಾಹಿತಿ ಪುಸ್ತಕದಲ್ಲಿ ತಿಳಿಸಿರುವಂತೆ ಕ್ರಮಜರುಗಿಸತಕ್ಕದ್ದು.
8) ಇ-ಆಡಳಿತ ವಿಭಾಗಕ್ಕೆ - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
9) ಕಡತಕ್ಕೆ.